**<u>ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ.</u>**

**<u>ಹಿರೇಕೆರೂರು.</u>**

**<u>ಸಿ.ಸಿ.ನಂಬರ್ಃ272/2020</u>**

ಸಿಡಬ್ಲ್ಯೂಃ3

ಪಿಡಬ್ಲ್ಯೂಃ3

| | | |
|---|---|---|
| ಸಾಕ್ಷಿಯ ಹೆಸರು | : | ಸಂತೋಷ ಲಮಾಣಿ |
| ತಂದೆಯ ಹೆಸರು | : | ಬೀಕಪ್ಪ |
| ವಯಸ್ಸು | : | 34 ವರ್ಷ |
| ಉದ್ಯೋಗ | : | ಚಾಲಕ |
| ವಾಸಸ್ಥಳ | : | ಬಾವಾಪುರ |

ಇಂದು ದಿನಾಂಕಃ 21.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**<u>ಮುಖ್ಯ ವಿಚಾರಣೆಃ</u>** ಮಾನ್ಯ ಎಪಿಪಿಯವರಿಂದಃ

ಸಾಕ್ಷಿಗೆ ಕಡತದಲ್ಲಿರುವ ಮಹಜರ ಎಂಬ ದಾಖಲೆಯನ್ನು ತೋರಿಸಲಾಗಿದ್ದು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ–2 ಎಂದು ಗುರತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–2(ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಸುಮಾರು 4–5 ವರ್ಷಗಳ ಹಿಂದೆ ಪೋಲಿಸ್ ಠಾಣೆಯಲ್ಲಿ ಮಾಡಿರುತ್ತೇನೆ. ಸದರಿ ದಾಖಲೆಯಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿರುವುದಿಲ್ಲ.

ಸಾಕ್ಷಿಗೆ ಕಡತದಲ್ಲಿರುವ ಮತ್ತೊಂದು ಮಹಜರ ಎಂಬ ದಾಖಲೆಯನ್ನು ತೋರಿಸಲಾಗಿದ್ದು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ–3 ಎಂದು ಗುರತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–3(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಸುಮಾರು 4–5 ವರ್ಷಗಳ ಹಿಂದೆ ಪೋಲಿಸ್ ಠಾಣೆಯಲ್ಲಿ ಮಾಡಿರುತ್ತೇನೆ. ಪೋಲಿಸರು ನನ್ನ ಸಮಕ್ಷಮದಲ್ಲಿ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ. ಸದರಿ ದಾಖಲೆಗಳಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ** ಮಾನ್ಯ ಎಪಿಪಿಯವರಿಂದಃ

ದಿನಾಂಕ 21-08-2019 ರಂದು ಅಪಘಾತದ ಹಿನ್ನೆಲೆಯ ಮೇರೆಗೆ ಪೋಲಿಸರು ಘಟನಾ ಸ್ಥಳಕ್ಕೆ ಬೇಟಿ ನೀಡಿದ್ದು ಚಾಸಾ-1 ರವರುತೋರಿಸಿದ ಜಾಗದಲ್ಲಿ ನ್ನನ ಮತ್ತು ಚಾಸಾ-2 ರವರ ಸಮಕ್ಷಮದಲ್ಲಿ ಬೆಳಿಗ್ಗೆ 8 ರಿಂದ 9 ಗಂಟೆಯವರೆಗೆ ನಿಪಿ-2 ರಂತೆ ಮಹಜರನ್ನು ಮಾಡಿ ಅದನ್ನು ಓದಿ ಹೇಳಿ ನಮ್ಮ ಸಹಿಗಳನ್ನು ಪಡೆದುಕೊಂಡರು ಎಂದರೆ ಸರಿಯಲ್ಲ. ನಂತರ ಅದೇ ದಿನ ಠಾಣಾ ಆವರಣದಲ್ಲ ಅಪಘಾತಕ್ಕೆ ಕಾರಣವಾದ ವಾಹನವನ್ನು ವಶಪಡಿಸಿಕೊಂಡಿದ್ದು ಚಾಸಾ-1 ಹಾಗೂ ನನ್ನ ಸಮಕ್ಷಮದಲ್ಲಿ ನಿಪಿ-3 ರಂತೆ ಬೆಳಿಗ್ಗೆ 10.30 ರಿಂದ 11.30 ರವೆರೆಗೆ ಜಪ್ತ ಪಂಚನಾಮೆಯನ್ನು ಮಾಡಿ ಓದಿ ಹೇಳಿ ನಮ್ಮ ಸಹಿಗಳನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ ಪರ ಶ್ರೀ ಪಿ ಆರ್ ಯು ವಕೀಲರಿಂದಃ ಇಲ್ಲಾ ಎಂದು ನುಡಿದಿರುತ್ತಾರೆ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.